# CS(M) EXAM 2012

G-DTN-M-LBOB

# KANNADA

## Paper II

## (Literature)

*Time Allowed : Three Hours* | *Maximum Marks : 300*

---

### *INSTRUCTIONS*

***Candidates should attempt questions 1 and 5 which are compulsory, and any THREE of the remaining questions, selecting at least ONE question from each Section.***

***Marks for each question are indicated against each.***

***Answers must be written in Kannada.***

***IMPORTANT : Whenever a question is being attempted, all its parts/sub-parts must be attempted contiguously. This means that before moving on to the next question to be attempted, candidates must finish attempting all parts/sub-parts of the previous question attempted. This is to be strictly followed.***

***Pages left blank in the answer-book are to be clearly struck out in ink. Any answers that follow pages left blank may not be given credit.***

---

## SECTION A

1. ಈ ಕೆಳಗಿನ ಪದ್ಯಗಳ ಸಂದರ್ಭವನ್ನು ಸೂಚಿಸಿ, ಅವುಗಳ ಭಾವ ಮತ್ತು ಸ್ವಾರಸ್ಯವನ್ನು ಕುರಿತು ಬರೆಯಿರಿ : *12×5=60*

(a) ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ರದಿಂ |
ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ದೊರೆ ಕರ್ಣನೇಱುಕ |
ರ್ಣನ ಕಡುನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ |
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತ ||

(b) ಹಬ್ಬಕ್ಕೆ ತಂದ ಹರಕೆಯ ಕುರಿ
ತೋರಣಕ್ಕೆ ತಂದ ತಳಿರ ಮೇಯಿತ್ತು
ಕೊಂದಹರೆಂಬುದನರಿಯದೆ
ಬೆಂದೊಡಲ ಹೊರೆಯ ಹೋಯಿತ್ತು
ಅಂದಂದೆ ಹುಟ್ಟಿತ್ತು ಅಂದಂದೆ ಹೊಂದಿತ್ತು
ಕೊಂದವರುಳಿದರೆ ಕೂಡಲಸಂಗಮದೇವಾ ?

(c) ಶಿವಶಿವಾ ನಿರ್ಬಂಧವಿದು ಕೌ |
ರವನಲಾಯಿತೆ ಮಧ್ಯಮಯ ಗಂ |
ಧವನು ಕುಡಿಸುವ ಪರಿಯಲಾ ತುಂಬಿಗಳ ಸೆಱ್ವಿಡಿದು |
ಅವನಿಪತಿಗಳ ಸೇವೆಯಿದು ಕ |
ಷ್ಟವಲೆ ಮೊದಲಲಿ ಬಳಿಕ ನಾವಿ |
ನ್ನವಗಡಿಸಲೇನಹುದು ಸಾರಥಿಯಾದೆವೇಳೆಂದ ||

(d) ಸಾಕು ಸಾಕು ಮನುಜಸೇವೆಯು ರಂಗಯ್ಯ ಇನ್ನು...
ಸ್ನಾನ ಮೌನ ನಿತ್ಯ ಸಂಧ್ಯಾನೇಮಗಳನೆ ತೊರೆದು
ಹೀನನಾಗಿ ಕೆಟ್ಟ ಜನರ ಮನೆಗಳನ್ನು ತಿರುಗಿ ತಿರುಗಿ
ಸ್ವಾನನಂತೆ ದಿನವ ಕಳೆವೆನೊ | ದುರಾಸೆಯನ್ನು
ಮನದಲಿಟ್ಟುಕೊಂಡು ಕುದಿವೆನೊ | ಕೊನೆಗೂ ಎಳ್ಳಕಾ
ಳಿನಷ್ಟು ಸುಖವ ಕಾಣೆನೊ | ರಂಗಯ್ಯ ರಂಗ ... ಸಾಕು ಸಾಕು ...

(e) ಭೋಗ ವಿಚಾರವು ಬೇಕು ನೃಪತಿಗಾತ್ಮ-
ಯೋಗ ವಿಚಾರವು ಬೇಕು
ರಾಗರಸಿಕನಾಗಬೇಕು ಭಾವಿಸೆ ವೀತ-
ರಾಗರಸಿಕನಾಗಬೇಕು ||

**2.** (a) ನಂಬಿಯಣ್ಣನ ರಗಳೆಯಲ್ಲಿಯ ವೃದ್ಧ ಮಾಹೇಶ್ವರ ಪ್ರಸಂಗದ ನಾಟಕೀಯ ಸ್ವಾರಸ್ಯವನ್ನು ವಿವರಿಸಿ, ಅದರ ತಾತ್ತ್ವಿಕ ಅಂಶವನ್ನು ತಿಳಿಸಿ. *30*

(b) ಅರ್ಜುನನನ್ನು ತೋರಿಸುವ ವಿಷಯದಲ್ಲಿ ಕರ್ಣ-ಶಲ್ಯರ ಒಳಜಗಳವನ್ನು ಕುಮಾರವ್ಯಾಸ ನಿರ್ವಹಿಸಿದ ರೀತಿಯನ್ನು ವಿವರಿಸಿ. *30*

**3.** (a) 'ಭರತೇಶ ವೈಭವ' ದಲ್ಲಿಯ ಭರತ-ಬಾಹುಬಲಿ ಪ್ರಸಂಗದಲ್ಲಿ ವ್ಯಕ್ತವಾಗುವ ಭರತ-ಬಾಹುಬಲಿಯರ ವ್ಯಕ್ತಿತ್ವವನ್ನು ಪರಿಚಯಿಸಿ. *30*

(b) ಕನಕದಾಸರ ಕೀರ್ತನೆಗಳಲ್ಲಿ ಕಂಡುಬರುವ ಸಾಮಾಜಿಕ ವಿಚಾರಗಳನ್ನು ವಿವರಿಸಿ. *30*

**4.** (a) ನೀವು ಓದಿರುವ ಪಠ್ಯಭಾಗದಲ್ಲಿ ಬಸವಣ್ಣನವರ ಭಕ್ತಿ ವಿಷಯಕವಾದ ವಿಚಾರಗಳನ್ನು ನಿರೂಪಿಸಿ. *30*

(b) ಸುಕುಮಾರಸ್ವಾಮಿಯ ಕತೆಯಲ್ಲಿ ಮುಖ್ಯಕಥೆ ಉಪಕಥೆಗಳ ಸಂಬಂಧವನ್ನು ವಿವರಿಸಿ. *30*

## SECTION B

**5.** ಈ ಕೆಳಗಿನವುಗಳನ್ನು ಕುರಿತು ಟಿಪ್ಪಣಿ ಬರೆಯಿರಿ (ಪ್ರತಿ ವಿಷಯಕ್ಕೆ ಸುಮಾರು 150 ಪದಗಳು) : *12×5=60*

(a) 'ಒಡಲಾಳ'ದ ಸಾಕವ್ವ

(b) 'ಜನಪದ-ಜಾನಪದ' ಪರಿಕಲ್ಪನೆ ಕುರಿತ ಹಾ.ಮಾ. ನಾಯಕರ ಅಭಿಪ್ರಾಯ

(c) ಕನ್ನಡ ಹೊಸಕಾವ್ಯ ಮತ್ತು ರಾಮಾನುಜನ್ ಕವಿತೆಗಳು

(d) 'ತುಘಲಕ' ನಾಟಕದ ಶೇಖ ಇಮಾಮುದ್ದೀನ

(e) ಒಡಲಾಳದ ಕುರಿಯಯ್ಯ

**6.** (a) ಮಾಸ್ತಿಯವರ ಕಥಾನಿರೂಪಣೆಯ ವೈಶಿಷ್ಟ್ಯದೊಂದಿಗೆ 'ಮೊಸರಿನ ಮಂಗಮ್ಮ' ಕತೆಯ ಆಶಯವನ್ನು ಕುರಿತು ಚರ್ಚಿಸಿ. *30*

(b) 'ಅಣ್ಣಯ್ಯನ ಮಾನವಶಾಸ್ತ್ರ' ಕತೆಯಲ್ಲಿ ಕತೆಗಾರರು ಹಿಂದೂಧರ್ಮವನ್ನು ಕುರಿತು ನೀಡುವ ದೃಷ್ಟಿಕೋನಗಳನ್ನು ವಿವರಿಸಿ. *30*

**7.** (a) ನೀವು ಓದಿರುವ ಪಠ್ಯಭಾಗವನ್ನು ಆಧರಿಸಿ ಕನ್ನಡ ನವ್ಯಕಾವ್ಯದ ಸ್ವರೂಪವನ್ನು ಪರಿಚಯಿಸಿ. *30*

(b) 'ಶೂದ್ರತಪಸ್ವಿ'ಯಲ್ಲಿ ಶಂಬೂಕನ ಕಥೆಯಲ್ಲಿ ಮಾಡಿಕೊಂಡ ರೂಪಾಂತರವನ್ನೂ ಅದರ ಔಚಿತ್ಯ-ಅನೌಚಿತ್ಯಗಳನ್ನೂ ಕುರಿತು ಚರ್ಚಿಸಿ. *30*

**8.** (a) ದೇವರನ್ನು ಕುರಿತ ಎ.ಎನ್. ಮೂರ್ತಿರಾಯರ ಅಭಿಪ್ರಾಯಗಳನ್ನು ವಿಮರ್ಶಿಸಿ. *30*

(b) ನೀವು ಓದಿದ ಪಠ್ಯಭಾಗವನ್ನಾಧರಿಸಿ ಕನ್ನಡದ ಮೊದಲ ತಲೆಮಾರಿನ ಕತೆಗಳ ಸ್ವರೂಪವನ್ನು ಪರಿಚಯಿಸಿ. *30*